# ಡಿಸೆಂಬರ್‌ಗೆ ಬೆಂಗಳೂರಿನಲ್ಲಿ 'ಕೃಷಿ ತೀರ್ಪು' ಕಾರ್ಯಕ್ರಮ

ಮೈಸೂರು: ಕೃಷಿ ಸಂಶೋಧನೆಯಲ್ಲಿ ಪ್ರಜಾ ತಾಂತ್ರೀಕರಣಕ್ಕಾಗಿ 'ರೈತ ತೀರ್ಪು' ಎಂಬ ಕಾರ್ಯಕ್ರಮ ನವೆಂಬರ್-ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ.

ಭಾರತದ ಕೃಷಿ ಸಂಶೋಧನೆಯನ್ನು ಕೃಷಿ ಉದ್ಯಮದ ಹಿಡಿತದಿಂದ ಬಿಡುಗಡೆಗೊಳಿಸಬೇಕಾದ ಅಗತ್ಯವಿದೆ ಎಂಬ ಉದ್ದೇಶ ವಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿರುವ 'ಆದರ್ಶ'(ದಿ ಅಲೆಯನ್ಸ್ ಫಾರ್ ಡೆಮಾಕ್ರಟೈಜಿಂಗ್ ಅಗ್ರಿಕಲ್ಚರಲ್ ರೀಸರ್ಚ್ ಇನ್ ಸೌತ್ ಏಷ್ಯಾ- ಎಡಿಎಆರ್‌ಎಸ್‌ಎ) ಎಂಬ ಸ್ವಯಂ ಸೇವಾ ಸಂಸ್ಥೆ 'ರೈತ ತೀರ್ಪು' ಕಾರ್ಯಕ್ರಮ ಆಯೋಜಿಸಿದೆ.

ರೈತರು, ರೈತ ಸಂಘಟನೆಗಳು, ವಿಜ್ಞಾನಿಗಳು, ಗ್ರಾಹಕ ಸಂಘಟನೆಗಳು, ನಾಗರಿಕ ಸಮಾಜದ ಪ್ರತಿನಿಧಿಗಳನ್ನು 'ಆದರ್ಶ'ದ ಒಳಗೊಂಡಿದೆ. ಕಾರ್ಯಕ್ರಮದ ಕುರಿತು ಡೆಕ್ಕನ್ ಡೆವಲ್ಪ್‌ಮೆಂಟ್ ಸೊಸೈಟಿ ನಿರ್ದೇಶಕ ಪಿ. ವಿ. ಸತೀಶ್, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಪ್ರಧಾನ ಸಂಚಾಲಕ ಕುರುಬೂರು ಶಾಂತಕುಮಾರ್, ಕೃಷಿ ಬರಹಗಾರ ಸಂತೋಷ್ ಕೌಲಗಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡಿದರು.

ಕೃಷಿ ಸಂಶೋಧನೆಗಳು ಸಾರ್ವಜನಿಕ ಹಿತಾಸಕ್ತಿಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿವೆ. ಬಹಳಷ್ಟು ಕೃಷಿ ವಿವಿಗಳು ಸಂಶೋಧನೆಗಳಿಗಾಗಿ ವಿದೇಶಿ ಮತ್ತು ಭಾರತೀಯ ಕಾರ್ಪೋರೇಟ್ ಕಂಪನಿಗಳಿಂದ ಧನ ಸಹಾಯ ಪಡೆಯುತ್ತಿವೆ. ಕೃಷಿ ಜ್ಞಾನ ವಿನಿಮಯ(ಕೆಐಎ)ದಡಿ ಅಮೆರಿಕದೊಡನೆ ಭಾರತ ಮಾಡಿಕೊಂಡಿರುವ ಒಪ್ಪಂದವು ಕೃಷಿ ಸಂಶೋಧನೆಯಲ್ಲಿ ಖಾಸಗಿ ವಲಯ ಪ್ರವೇಶದ ಸ್ಪಷ್ಟವಾಗಿದೆ. ಇದೆಲ್ಲದರ ಪರಿಣಾಮ ಕೃಷಿ ಸಂಶೋಧನೆ ಖಾಸಗಿ ಲಾಭದ ಕಡೆ ಮುಖ ಮಾಡಿ ನಿಂತಿದೆ. ಇದೆಲ್ಲವನ್ನೂ ವಿಶ್ಲೇಷಿಸಲು, ಟೀಕಿಸಲು ಮತ್ತು ವಿಜ್ಞಾನಿಗಳೊಂದಿಗೆ ಮಾತುಕತೆ ನಡೆಸಲು ರೈತ ತೀರ್ಪು ಅಪರೂಪದ ವೇದಿಕೆಯಾಗಲಿದೆ ಎಂದು ತಿಳಿಸಿದರು.

ರೈತ ತೀರ್ಪು ಪ್ರಕ್ರಿಯೆ ನ್ಯಾಯ ಸಮ್ಮತವಾಗಿ ನಡೆಯುವಂತೆ ನಿಗಾ ವಹಿಸಲು ವಿವಿಧ ಕ್ಷೇತ್ರದ ಗಣ್ಯರನ್ನು ಒಳಗೊಂಡಿರುವ ವೀಕ್ಷಕರ ಸಮಿತಿ ರಚಿಸಲಾಗಿದೆ. ನಿವೃತ್ತ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ, ಡಾ. ಎಚ್. ಸುದರ್ಶನ್, ಆರ್ಥಿಕ ತಜ್ಞ ಡಾ. ಗೋಪಾಲ್ ಖಾಡೇಕುಡಿ, ಡಾ. ದ್ವಾರಕೀನಾಥ್, ಪ್ರಧಾನ ಮಂತ್ರಿಗಳ ಮಾಜಿ ಸಲಹೆಗಾರ ಕೆ. ಆರ್. ವೇಣುಗೋಪಾಲ್, ಸಾಹಿತಿ ದೇವನೂರ ಮಹಾದೇವ ಸಮಿತಿ ಸದಸ್ಯರು.

ರೈತ ತೀರ್ಪು ನೀಡಲೆಂದು 30 ಜನ ತೀರ್ಪುಗಾರರನ್ನು ಆಯ್ಕೆ ಮಾಡಲಾಗುವುದು. ಈ ಪೈಕಿ ಶೇ. 50ರಷ್ಟು ಮಹಿಳೆಯರು ಇರುತ್ತಾರೆ. ಉಳಿದಂತೆ ಸಣ್ಣ ರೈತರು, ಕುಶಲಕರ್ಮಿಗಳು, ಹೈನುಗಾರಿಕೆತಲ್ಲಿ ತೊಡಗಿಸಿಕೊಂಡವರು ಸೇರಿದಂತೆ ಕೃಷಿ ಬದುಕಿಗೆ ಸಂಬಂಧಿಸಿದ ಎಲ್ಲರನ್ನೂ ತೊಡಗಿಸಿಕೊಳ್ಳಲಾಗುವುದು.

ವಿವರಗಳಿಗೆ- ಕುರುಬೂರು ಶಾಂತಕುಮಾರ್, ರಾಜ್ಯ ಕಬ್ಬು ಬೆಳೆಗಾರರ ಸಂಘ, ನೀಲಕಂಠೇಶ್ವರ ಮಠ, ಗನ್ ಹೌಸ್ ಎದುರು, ಊಟಿ ರಸ್ತೆ, ಮೈಸೂರು ಇಲ್ಲಿ ಸಂಪರ್ಕಿಸಬಹುದು.